

# ದಕ್ಷಿಣದಲ್ಲಿದೆ 'ಕ್ಯಾಸ್ಟಿಂಗ್ ಕೌಚ್'!

ನಟಿಸುವ ಹಂಬಲವುಳ್ಳ ಯುವತಿಯರು ಚಿತ್ರರಂಗದೊಳಗೆ ಪ್ರವೇಶಿಸುವುದು ಸುಲಭವಲ್ಲ. ಅದಕ್ಕೆ ಉತ್ತಮ ಕೌಟುಂಬಿಕ ಹಿನ್ನೆಲೆ ಇರಬೇಕು. ಹಾಗೆ ಯಾವ ಬೆಂಬಲವೂ ಇಲ್ಲದೆಯೇ ಬಂದರೂ ನೆಲೆಯೂರುವುದು ಸುಲಭವಲ್ಲ. ನಾಯಕಿಯಾಗಿ ಬೆಳೆಯಬೇಕೆಂದರೆ ಅವರು ಅನೇಕ 'ತ್ಯಾಗ' ಗಳಿಗೆ ಸಿದ್ಧರಿರಬೇಕು ಎನ್ನುವ ಮಾತು ಕೇಳಿಬರುತ್ತಿದ್ದವು. 'ಕ್ಯಾಸ್ಟಿಂಗ್ ಕೌಚ್' ಎಂದು ಕರೆಯಲಾಗುವ ಈ ಅನೈತಿಕ ಪದ್ಧತಿ ಅಲಿಖಿತ ನಿಯಮದಂತೆ ಬಳಕೆಯಲ್ಲಿತ್ತು ಎನ್ನುವವರಿದ್ದಾರೆ. ಇಲ್ಲಿ ನಟಿಯರು ತಮ್ಮ 'ಬಡ್ತಿ'ಗಾಗಿ ನಿರ್ಮಾಪಕ, ನಿರ್ದೇಶಕನಿಂದ ಹಿಡಿದು ಅನೇಕರನ್ನು 'ತೃಪ್ತಿ' ಪಡಿಸಬೇಕು. ಇದು ಈಗಲೂ ಚಾಲ್ತಿಯಲ್ಲಿದೆ ಎನ್ನುವುದು ಮುಚ್ಚಿಟ್ಟ ಸತ್ಯ. ನಟಿ ಸುರ್ವೀನ್ ಚಾವ್ಲಾ ಪ್ರಕಾರ ಅಸಹ್ಯಕರ ಚಟುವಟಿಕೆ ದಕ್ಷಿಣ ಭಾರತದ ಚಿತ್ರರಂಗಗಳಲ್ಲಿ ಮಾತ್ರವಿದೆ, ಬಾಲಿವುಡ್‌ನಲ್ಲಿ ಇಲ್ಲ.

ಬಾಲಿವುಡ್‌ನಲ್ಲಿ ತನಗೆ ಕ್ಯಾಸ್ಟಿಂಗ್ ಕೌಚ್‌ನ ಅನುಭವ ಆಗಿಲ್ಲ. ಅಷ್ಟರಮಟ್ಟಿಗೆ ತಾನು ಅದೃಷ್ಟವಂತೆ ಎಂದು ಹೇಳಿಕೊಂಡಿದ್ದಾಳೆ ಸುರ್ವೀನ್. ಆದರೆ, ದಕ್ಷಿಣ ಭಾರತದ ಚಿತ್ರರಂಗಗಳಲ್ಲಿ ಅಂತಹ ಒತ್ತಡವನ್ನು ಎದುರಿಸಿದ್ದಾಗಿ ಆಕೆ ಹೇಳಿಕೊಂಡಿದ್ದಾಳೆ. ಚಂಡೀಗಡ ಮೂಲದ ಈ ನಟಿ ಮಾತೃಭಾಷೆ ಪಂಜಾಬಿಯ ಜತೆಗೆ ಬಾಲಿವುಡ್‌ನಲ್ಲಿಯೂ ಗುರುತಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಳೆ. ಅಂದ ಹಾಗೆ, ಈಕೆ ಮೊದಲು ಬಣ್ಣ ಹಚ್ಚಿದ್ದು ಕನ್ನಡ ಚಿತ್ರಕ್ಕೆ. ಶಿವರಾಜ್‌ಕುಮಾರ್ ಅಭಿನಯದ 'ಪರಮೇಶಿ ಪಾನ್‌ವಾಲ' ಆಕೆಯ ಸಿನಿಮಾ ಪ್ರವೇಶಕ್ಕೆ ಬಾಗಿಲು ತೆರೆದಿತ್ತು. ಅರ್ಜುನ್ ಸರ್ಜಾರ ದ್ವಿಭಾಷಾ ಚಿತ್ರ 'ಅಭಿಮನ್ಯು'ವಿನಲ್ಲೂ ಸುರ್ವೀನ್ ನಟಿಸಿದ್ದಳು. ತಮಿಳು ಮತ್ತು ತೆಲುಗಿನಲ್ಲಿಯೂ ಮುಖ ತೋರಿಸಿ ಬಂದಿದ್ದಾಳೆ. ಆಕೆಯ ಅನುಭವ ಇಡೀ ದಕ್ಷಿಣದ ಎಲ್ಲ ಚಿತ್ರರಂಗಗಳಲ್ಲಿಯೂ ಆಗಿದೆಯೇ ಎನ್ನುವುದು ತಿಳಿದಿಲ್ಲ. ಬಾಲಿವುಡ್‌ನಲ್ಲಿ ದಶಕಗಳ ಹಿಂದೆ ನಟಿಯರನ್ನು ಬಳಸಿಕೊಳ್ಳುವ ಕೆಟ್ಟ ಪದ್ಧತಿ ಇತ್ತು. ಈಗ ಒಮ್ಮೆಯೂ ನನ್ನ ಅನುಭವಕ್ಕೆ ಬಂದಿಲ್ಲ. ಬಾಲಿವುಡ್ ಅಷ್ಟರಮಟ್ಟಿಗೆ ಬದಲಾವಣೆಯಾಗಿದೆ. ಈಗಿನ ನಿರ್ಮಾಪಕರು, ನಿರ್ದೇಶಕರು ನಟಿಯರನ್ನು ಅವರ ಪ್ರತಿಭೆಗೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ ಎಂದಿದ್ದಾಳೆ ಆಕೆ. ಸುರ್ವೀನ್‌ಳ ಅನುಭವ ದಕ್ಷಿಣ ಭಾರತದೆಡೆಗಿನ ಬಾಲಿವುಡ್‌ನ ಕೆಟ್ಟ ಅಭಿಪ್ರಾಯಗಳನ್ನು ಇಮ್ಮಡಿಗೊಳಿಸುವಂತೆ ಇರುವುದು ಹೌದು. ಆದರೆ ಅದರಿಂದ ಬಾಲಿವುಡ್ ಹೊರತಾಗಿದೆ ಎನ್ನುವ ಆಕೆಯ ಮಾತನ್ನು ಅಣಕಿಸುವಂತೆ ಹತ್ತಾರು ಕಥೆಗಳು ಅಲ್ಲಿನ ಗಲ್ಲಿಗಳಿಂದ ಹೊರಬರುತ್ತಲೇ ಇವೆ.

# ಭಾರತ 'ಕಷ್ಟಕರ' ದೇಶ

'ಭಾರತ ವೈವಿಧ್ಯಮಯ ದೇಶ', 'ವಿವಿಧತೆಯಲ್ಲಿ ಏಕತೆ ಇರುವ ದೇಶ' ಇತ್ಯಾದಿ ಗುಣವಿಶೇಷಣಗಳನ್ನು ನೋಡುತ್ತೇವೆ. ಆದರೆ ಪ್ರಿಯಾಂಕಾ ಚೋಪ್ರಾ ಪಾಲಿಗೆ ಈ ವೈವಿಧ್ಯವೇ ಕಷ್ಟವಾಗಿದೆಯಂತೆ. ಈ ಕಷ್ಟಗಳ ಲೆಕ್ಕಾಚಾರವನ್ನು ಆಕೆ ಹಾಕಿರುವುದು ದೇಶದ ಜನರ ಬದಲಾಗದ ಮನಸ್ಥಿತಿಯ ಕುರಿತು.

'ಭಾರತ ಕಷ್ಟಕರವಾದ ದೇಶ. ಇದು ಪ್ರತಿ ರಾಜ್ಯವೂ ವಿಭಿನ್ನ ಸ್ವರೂಪ, ಭಾಷೆ, ಸಂಸ್ಕೃತಿ, ಬರವಣಿಗೆ, ಚಿಂತನಾ ಕ್ರಮ, ಧರ್ಮಗಳನ್ನು ಒಳಗೊಂಡ ಒಂದು ವಿಶಿಷ್ಟ ಜಗತ್ತಿನಂತೆ. ಆದರೆ ಇಲ್ಲಿನ ಮಹಿಳೆಯರ ಕುರಿತಾದ ಜನರ ಮನಸ್ಥಿತಿ ಬದಲಾಗುವುದು ಮಾತ್ರ ಸುಲಭವಲ್ಲ' ಎಂದಿದ್ದಾಳೆ ಪಿಗ್ಗಿ. ಇಷ್ಟೆಲ್ಲಾ ವೈವಿಧ್ಯವಿದ್ದರೂ ಜನರ ಮನಸ್ಥಿತಿ ಒಂದೇ. ಅದು ಮಹಿಳೆಯರ ಕುರಿತಂತೂ ಬದಲಾಗಲು ಅನೇಕ ಸಮಯವೇ ಬೇಕು. ಅದೇ ರೀತಿ ಶ್ರೀಮಂತ–ಬಡವರ ನಡುವಣ ಅಂತರ ಕುಗ್ಗುವುದು ಸಹ ಸಲೀಸಾಗಿ ಸಾಧ್ಯವಿಲ್ಲ. ಇವೆರದರ ನಡುವೆ ಅಂತಹ ವ್ಯತ್ಯಾಸವಿಲ್ಲ ಎನ್ನುವುದು ಆಕೆಯ ಅಭಿಪ್ರಾಯ. ಬಿಟೌನ್‌ಗಿಂತಲೂ ಹಾಲಿವುಡ್‌ನಲ್ಲಿಯೇ ಹೆಚ್ಚು ಕಾಣಿಸಿಕೊಳ್ಳುತ್ತಿರುವ ಪಿಗ್ಗಿ ಯುನಿಸೆಫ್‌ನ ರಾಯಭಾರಿಯೂ ಹೌದು. ಶ್ರೀಮಂತ–ಬಡವರ ನಡುವಣ ಅಂತರ, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ದೇಶದಲ್ಲಿ ಎಲ್ಲರಿಗೂ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಬಡತನ ನಿವಾರಣೆಯ ಕುರಿತಾದ ಯೋಜನೆಗೆ ಪಿಗ್ಗಿ ಪ್ರಚಾರ ನೀಡುತ್ತಿದ್ದಾಳೆ.

ಹಾಲಿವುಡ್‌ನಲ್ಲಿ ವೃತ್ತಿ ಕಟ್ಟಿಕೊಳ್ಳುವ ಪ್ರಯತ್ನದಲ್ಲಿರುವ ಪಿಗ್ಗಿಗೆ, ಭಾರತದ ಪ್ರೇಕ್ಷಕರು ತನ್ನನ್ನು ಮರೆತೇ ಬಿಡುತ್ತಾರೆ ಎಂದೇನೂ ಅನಿಸಿಲ್ಲವಂತೆ. ಎಷ್ಟೋ ನಾಯಕ/ನಾಯಕಿಯರು ಎರಡು ಮೂರು ವರ್ಷ ಸಿನಿಮಾದಲ್ಲಿ ನಟಿಸುವುದೇ ಇಲ್ಲ. ಅವರನ್ನು ಪ್ರೇಕ್ಷಕರು ಮರೆತಿರುವುದಿಲ್ಲ. ಹಾಗೆಯೇ ತನ್ನನ್ನೂ ಮರೆಯುವುದಿಲ್ಲ. ತನ್ನಲ್ಲಿ ಅಭದ್ರತೆಯ ಭಾವವೂ ಕಾಡುತ್ತಿಲ್ಲ ಎಂದು ಹೇಳಿಕೊಂಡಿದ್ದಾಳೆ ಆಕೆ. 'ಕಾಣಿಸಿಕೊಳ್ಳಬೇಕು' ಎಂಬ ಕಾರಣಕ್ಕೆ ಹಿಂದಿ ಚಿತ್ರದಲ್ಲಿ ನಟಿಸುವುದು ತನಗೆ ಇಷ್ಟವಿಲ್ಲ. ಪ್ರತಿ ಶನಿವಾರ ಬರುವ ಧಾರಾವಾಹಿಯನ್ನು ಜನ ವೀಕ್ಷಿಸುತ್ತಾರೆ. 'ಬೇ ವಾಚ್' ಬಿಡುಗಡೆ ಆದಾಗಲೂ ನೋಡುತ್ತಾರೆ ಎಂದು ಪಿಗ್ಗಿ ಆತ್ಮವಿಶ್ವಾಸದಿಂದ ಹೇಳಿಕೊಂಡಿದ್ದಾಳೆ.

■ ಅಮಿ

